ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 105-109
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬೇಂದ್ರೆಯವರ "ಬಡತನವು ಸಾಹಿತ್ಯದ ವಸ್ತುವೇಕಾಗಿದೆ?" : ಒಂದು ಅಧ್ಯಯನ

**ಡಾ. ಅನಸೂಯ ವೈ. ಟಿ**
ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ ಸಂಸ್ಥೆಯ ಪಿ. ಸಿ. ಜಾಬಿನ ವಿಜ್ಞಾನ ಮಹಾವಿದ್ಯಾಲಯ, ವಿದ್ಯಾನಗರ, ಹುಬ್ಬಳ್ಳಿ

***Abstract:***
*ಬೇಂದ್ರೆಯವರ "ಬಡತನವು ಸಾಹಿತ್ಯದ ವಸ್ತುವೇಕಾಗಿದೆ"? ನವೋದಯ ಸಾಹಿತ್ಯದ ವಸ್ತುವಿವೇಚನೆಯನ್ನು ಕುರಿತ ಲಘುಟಿಪ್ಪಣಿಯಾಗಿದೆ. ಈ ವಿಮರ್ಶಾ ಲೇಖನದಲ್ಲಿ ಬೇಂದ್ರೆಯವರು ಬಡತನಕ್ಕೆ ತೀರಾ ಹತ್ತಿರದಿಂದ ಮಾಡಿರುವ ಈ ಚಿಂತನೆ ಎಷ್ಟು ತೀವ್ರವಾಗಿದೆ ಎಂಬುದನ್ನು ಗಮನಿಸಬಹುದು. ಬೇಂದ್ರೆಯವರ ಈ ವಿಮರ್ಶಾ ಲೇಖನವು ಒಂದು ಸಮಾಜಶಾಸ್ತ್ರೀಯ ವಿಮರ್ಶೆಯೆಂಬುದಾಗಿ ಗುರುತಿಸಲಾಗಿದೆಯಲ್ಲದೆ ಈ ವಿಮರ್ಶೆಯು ಸಾಹಿತ್ಯದ ಒಂದು ಪ್ರಕ್ರಿಯೆಯಾಗಿದೆ. ಸಾಹಿತ್ಯವು ಅಮೂರ್ತದಲ್ಲಿ ಸೃಷ್ಟಿಯಾಗುವುದಿಲ್ಲ. ಇದಕ್ಕೆ ಕಾಲ, ಸಮಾಜ, ರಾಜಕೀಯ, ಅರ್ಥವ್ಯವಸ್ಥೆ, ತಾತ್ವಿಕತೆ, ಧರ್ಮ, ವ್ಯಕ್ತಿ, ದೇಶ ಇವೆಲ್ಲವುಗಳ ಜೊತೆಗೆ ಬಂಧಿತವಾಗಿದೆ. ಸಾಹಿತ್ಯ ಕೇವಲ ಹರ್ಷಕೊಡುವ ರಸಾಸ್ವಾದನೆ ನೀಡುವ ವಸ್ತುವಾಗಿಲ್ಲ, ಇದು ಇರುವ ಸ್ಥಿತಿಯಿಂದ ಮತ್ತೊಂದರ ಅಥವಾ ಹೊಸ ಸ್ಥಿತಿಗೆ ಓದುಗನನ್ನು ಕೊಂಡೊಯ್ಯಬೇಕಾಗುತ್ತದೆ.*

***Keywords:*** *ಕನ್ನಡ ಸಾಹಿತ್ಯ, ಬಡತನ, ದ.ರಾ.ಬೇಂದ್ರೆ, ಸಮಾಜಶಾಸ್ತ್ರೀಯ ವಿಮರ್ಶೆ.*

## ಪೀಠಿಕೆ

ಬೇಂದ್ರೆಯವರ "ಬಡತನವು ಸಾಹಿತ್ಯದ ವಸ್ತುವೇಕಾಗಿದೆ"? ಲೇಖನವು ಸಮಾಜಶಾಸ್ತ್ರೀಯ ವಿಮರ್ಶೆಯೆಂದು ಕರೆಯಲ್ಪಟ್ಟಿದೆ. ಹೀಗಾಗಿ ಸಮಾಜಶಾಸ್ತ್ರೀಯ ವಿಮರ್ಶೆಯೊಂದರ ಸಾಹಿತ್ಯ ಕೃತಿಯನ್ನು ಅದರ ಸಾಮಾಜಿಕ, ಆರ್ಥಿಕ, ರಾಜಕೀಯ, ಮತ್ತು ನೈತಿಕ ಮೌಲ್ಯಗಳ ಆಧಾರದ ಮೇಲೆ ನೋಡಲಾಗುತ್ತದೆ. ಇಲ್ಲಿನ ವಿಮರ್ಶಕರಿಗೆ ಸಮಾಜಶಾಸ್ತ್ರ, ಇತಿಹಾಸ, ರಾಜಕೀಯಶಾಸ್ತ್ರ ಬಹಳ ಮುಖ್ಯವಾದದ್ದು. ಸಮಾಜಶಾಸ್ತ್ರೀಯ ವಿಮರ್ಶಕರನ್ನು ಎಲ್ಲಾ ಕಾಲದಲ್ಲೂ ಕಾಣಬಹುದು. ಹಾಗೂ ಇದನ್ನು ಸಾಮಾಜಿಕ ನೆಲೆಯಲ್ಲಿಯೂ ವಿಮರ್ಶಿಸುವುದರಿಂದ ಇದನ್ನು ಸಮಾಜಶಾಸ್ತ್ರೀಯ ವಿಮರ್ಶೆ ಎನ್ನಬಹುದು.

ಬೇಂದ್ರೆಯವರ ಲೋಕದಲ್ಲಿ ಎಲ್ಲಾ ಕಾಲದಲ್ಲೂ ಇದ್ದೇ ಇರುವ ಒಂದು ಸ್ಥಿತಿಯಾದ ಬಡತನವನ್ನು ಸಾಹಿತ್ಯ ವಸ್ತುವಾಗಿ ಆರಿಸಿಕೊಂಡು ಅದರ ವ್ಯಾಪಕತೆ, ಅದರಿಂದ ಆಗಿರುವ ಪರಿಣಾಮಗಳು ದುಷ್ಪರಿಣಾಮಗಳು, ಸಿರಿವಂತರು ಮತ್ತು ಬಡವರ ನಡುವಿನ ಅಂತರವನ್ನು ಮುಖ್ಯವಾಹಿನಿಯ ಚರ್ಚೆಯ ವಸ್ತುವಾಗಿಸಿಕೊಂಡಿದ್ದಾರೆ ಎನ್ನುವುದನ್ನು ಅರಿಯಬೇಕಾಗಿದೆ. ಬೇಂದ್ರೆಯವರು ತಮ್ಮ ಲೇಖನದಲ್ಲಿ 'ಬಡತನದ ಬಾಳು' ಎಂದರೆ ಮುಳ್ಳು ಬರುವವು, ಮಹಾರೋಗಿಯನ್ನು ಮುಟ್ಟಿಸಿಕೊಳ್ಳದಂತೆ ಬಡತನದ ಸ್ಪರ್ಶವೂ ತಮಗಾಗಬಾರದೆಂದು ಎಲ್ಲರೂ ಯತ್ನಿಸುವವರು ಎಂಬುದನ್ನು ಚರ್ಚಿಸಿದ್ದಾರೆ. ಅಂದರೆ

***Please cite this article as:*** ಅನಸೂಯ, ವೈ. ಟಿ. (2026). ಬೇಂದ್ರೆಯವರ "ಬಡತನವು ಸಾಹಿತ್ಯದ ವಸ್ತುವೇಕಾಗಿದೆ?": ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 5(3), 105–109

ಸಮಾಜದಲ್ಲಿ ಅಥವಾ ಇಡೀ ವಿಶ್ವದಲ್ಲಿ ವಾಸಿಸುವ ಯಾವುದೇ ವ್ಯಕ್ತಿಯಾಗಲಿ ಬಡತನದ ದಾರಿದ್ರ್ಯವನ್ನು ಬಯಸುವುದಿಲ್ಲ ಅದರಿಂದ ಸದಾಕಾಲ ಅನುಭವಿಸುವ ದುಃಖ, ಯಾತನೆ, ಸಂಕಟವೇ ಮೂಲ ಕಾರಣವಿರಬಹುದು. ಹೀಗಾಗಿ ಸಿರಿವಂತರು ಸದಾಕಾಲ ತಾವು ಸಿರಿವಂತರಾಗಿರಲು ಬಯಸುತ್ತಾರೆ ಹಾಗೂ ಬಡವರು ತಮ್ಮ ಈ ದಾರಿದ್ರ್ಯದ ಅವಸ್ಥೆಯಿಂದ ಸ್ವಲ್ಪಮಟ್ಟಿಗಾದರೂ ತಪ್ಪಿಸಿಕೊಳ್ಳ ಬೇಕೆಂದು ಹವಣಿಸುತ್ತಲೇ ಇರುತ್ತಾರೆ, ಜೊತೆಗೆ ಬೇಂದ್ರೆಯವರ ಪ್ರಕಾರ ಬಡತನವೆಂಬುದು ನರಕಯಾತನೆಯೆಂಬಂತಾಗಿದೆ.

ಬೇಂದ್ರೆಯವರು ಬಡತನವನ್ನು "ಮಹಾರೋಗಿಗೆ" ಹೋಲಿಸಿರುವುದು ಗಮನಾರ್ಹವಾದ ಅಂಶವಾಗಿದೆ. ಮಹಾರೋಗವೆಂದರೆ ವ್ಯಕ್ತಿ ಅದರಿಂದ ಸಹಿಸಲಸಾಧ್ಯವಾದ ಯಾತನೆಯಿಂದ ಸಾಯುವುದು ಖಚಿತ, ಹಾಗೆಯೇ ಬಡತನ ಬಂದಂತಹ ವ್ಯಕ್ತಿ ಅನೇಕ ಸಂಕಷ್ಟಗಳಿಂದ ನರಳಾಡುತ್ತಾ ಸಾಯುತ್ತಾರೆ. ಹೀಗೆ ಒಂದೆಡೆ ಬಡತನವನ್ನು ವಿಶ್ಲೇಷಿಸಿದ ಬೇಂದ್ರೆಯವರು 'ಬಡತನವೆಂಬುದು ಕಡೆತನಕಿರಲಿ" ಎಂದು ಹಾಡಿದ ದಾಸರ ಮಾತನ್ನೂ ನೆನಪಿಸುತ್ತಾರೆ. ಇದರೊಂದಿಗೆ ಅವರು "ಎಲ್ಲರಿಗೂ ಬಡತನವು ಬಡಿದುಕೊಳ್ಳಲಿ ದೇವಾ" ಎಂಬುದಾಗಿ ದಾಸರು ಎಲ್ಲಿಯೂ ಹಾಡಿಲ್ಲೆನ್ನುವುದನ್ನೂ ಲೇಖನದಲ್ಲಿ ತಿಳಿಸಲು ಮರೆಯುವುದಿಲ್ಲ.

ಬಡತನವು ನನಗಿರಲಿ ಬಾಳ ಮಕ್ಕಳಿರಲಿ! ಮೇಲೆ ಗುರುವಿನ ದಯವಿರಲಿ' ಎಂಬ ಕರುಣಗೀತದಲ್ಲಿ ಗುರುವಿನ ದಯೆಯಿದ್ದರೆ ಬಡತನವು ದಕ್ಕುವುದಿಲ್ಲವೆಂದೇ ಸೂಚಿತವಾಗಿದೆ. ಬೇಂದ್ರೆಯವರ ಅನೇಕ ಕವನಗಳಲ್ಲಿ ಬಡತನವೆನ್ನುವ ವಸ್ತುವಿನ ತೀವ್ರತೆಯನ್ನು ಹಪಹಪಿತನವನ್ನು ಕಾಣಬಹುದು. ಉದಾ: ಕುರುಡುಕಾಂಚಾಣ, ಅನ್ನಾವತಾರ, ನಾನುಬಡವಿ, ಭೂಮಿತಾಯಿಯ ಚೊಚ್ಚಲಮಗ, ಅನ್ನಯಜ್ಞ ಇತ್ಯಾದಿ. ಇವೆಲ್ಲವುಗಳಲ್ಲಿಯೂ ಅನ್ನವೇ ಕೇಂದ್ರವಾಗಿದೆ ನರರ ಜೀವಿತಕ್ಕೆ ಎಂದು ತಿಳಿಸುತ್ತವೆ.

"ಅನ್ನದ ಅನ್ಯಾಯ ಕಾವಾಗ್ನಿಯಲ್ಲಿ ಕರಗುತ್ತಿದೆ" ಎಂದು ಅಡಿಗರು ಹೇಳಿದರೆ "ಹೊಟ್ಟೆಯೇ ಕೇಂದ್ರವಾಗಿದೆ ನರರ ಜೀವಿತಕ್ಕೆ" ಎಂದಿದ್ದಾರೆ ಬೇಂದ್ರೆ.

ಬಡತನವನ್ನು ಮೀರುವ ಪ್ರಯತ್ನವನ್ನು ಲೋಕದಲ್ಲಿ ಪ್ರತಿಯೊಬ್ಬರೂ ಮಾಡುತ್ತಾರೆ ಆದರೆ ಅದು ಎಷ್ಟು ಸಾಧ್ಯವೋ ತಿಳಿಯುವುದಿಲ್ಲ. ಒಂದು ಮನೆ ಹಾಳಾದಂತೆ ಇನ್ನೊಂದು ಮನೆಯ ಸಿರಿವಂತಿಕೆ ಹೆಚ್ಚುತ್ತಾ ಹೋಗುವುದು ಚರಿತ್ರೆಯುದ್ದಕ್ಕೂ ನಡೆದಿರುವುದನ್ನು ಕಾಣಬಹುದು. ಇಲ್ಲಿ ಒಬ್ಬರನ್ನು ನಾಶ ಮಾಡುವುದೆಂದರೆ ತಮ್ಮ ತಮ್ಮ ಮನೆಯ ಸಿರಿಯನ್ನು ಹೆಚ್ಚಿಸಲು ಜನ ಪ್ರಯತ್ನಿಸುತ್ತಾರೆಂದು ತಿಳಿಸಿದ್ದಾರೆ.

ಬೆಂದ್ರೆಯವರು ಬಡತನದ ಬಗ್ಗೆ ಹೊಂದಿರಬಹುದಾದ ಮತ್ತೊಂದು ತಪ್ಪುಗ್ರಹಿಕೆಯ ಬಗೆಗೆ ತಿಳಿಸುವರು, ಅಂದರೆ ಬಡತನವು ಅವರವರ ಪಾಪದ ಫಲ ಎಂಬ ಗ್ರಹಿಕೆ. ಹೀಗೆ ಜನ ತಿಳಿಯುವುದರಿಂದ ಅದನ್ನು ನಿರ್ಮೂಲನೆ ಮಾಡುವ ಪ್ರಯತ್ನವನ್ನು ಮಾಡುತ್ತಲೇ ಇಲ್ಲ. ಇದರಿಂದಾಗಿ ಬಡತನವು ಸಮಾಜದಲ್ಲಿ ಪ್ಲೇಗುಗಳಂತೆ ಹರಡುತ್ತಿರುವ ಒಂದು ಸಾಂಕ್ರಾಮಿಕ ರೋಗವೆಂಬಂತಿದೆ ಎಂದು ಚರ್ಚಿಸಿದ್ದಾರೆ.

ಬಡವರು ಬಲ್ಲಿದರಿಗೆ ದೀನರಾದಂತೆ ವರ್ತಿಸಿದರೆ ಸಿರಿವಂತರು ಅವರ ಮೇಲೆ ನಿರಂತರ ದೌರ್ಜನ್ಯ, ದಬ್ಬಾಳಿಕೆಯನ್ನು ನಡೆಸುತ್ತಲೇ ಇರುತ್ತಾರೆ. ಶ್ರೀಮಂತರು ಬಡವರ ಮೇಲೆ ನಡೆಸುವಂತಹ ಈ ದೌರ್ಜನ್ಯಗಳನ್ನು ಬೇಂದ್ರೆಯವರು ತಮ್ಮ 'ಕುರುಡು ಕಾಂಚಾಣ' ಎಂಬ ಕವನದಲ್ಲಿ ತುಂಬಾ ಮಾರ್ಮಿಕವಾಗಿ ಹಿಡಿದಿಟ್ಟಿದ್ದಾರೆ.

***ಕುರುಡು ಕಾಂಚಾಣ ಕುಣಿಯುತಲಿತ್ತು***
***ಕಾಲಿಗೆ ಬಿದ್ದವರ ತುಳಿಯುತಲಿತ್ತು....***

ಬೇಂದ್ರೆಯವರು ತಮ್ಮ 'ಬಿಸಿಲ್ಗುದುರೆ' ಕವನದಲ್ಲಿಯೂ ಬಡತನದ ತೀವ್ರತೆಯನ್ನು ಅದರ

ಮುಗ್ಧತೆಯನ್ನು ತಿಳಿಸುತ್ತಾರೆ. ಒಂದರ್ಥದಲ್ಲಿ ಸಾಮಾಜಿಕ ಮೌಲ್ಯಗಳನ್ನೇ ನಾಶ ಮಾಡುವಂತ ಗುಣ ಬಡತನದಲ್ಲಿದೆ. ಮುಗ್ಧತೆಯನ್ನು, ಸ್ನೇಹವನ್ನು, ಪ್ರೇಮವನ್ನು ಒಟ್ಟಾರೆ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ನಾಶಗೊಳಿಸುವ ಪ್ರಚ್ಛನ್ನ ಶತ್ರು ಬಡತನವಾಗಿದೆ ಎಂಬಂತೆ ಚರ್ಚಿಸಿದ್ದಾರೆ ಬೇಂದ್ರೆ. (ತಾಮ್ರದ ಬಿಲ್ಲೆ ತಾಯಿ ಮಕ್ಕಳನ್ನು ಅಗಲಿಸಿತ್ತೆಂಬಂತೆ). ಇದು ಅನ್ನದ ಕೊರತೆಯನ್ನು ಮಾತ್ರವಲ್ಲದೆ ಎಲ್ಲವನ್ನೂ ನಾಶಗೊಳಿಸುತ್ತದೆ. ಬಡವರು ಹಕ್ಕಿಗಾಗಿ ಹೋರಾಡುವ ತಿರುಕರಾದರೆ, ಸಿರಿವಂತರು ಶಾಸ್ತ್ರದ ಧಾರ್ಮಿಕರು, ಇವರು ನಿರುಪದ್ರವಿಗಳಾದ ಕೂಲಿಕಾರರಾದರೆ, ಅವರು ಜಂಭದ ಪರೋಪಕಾರಿಗಳು, ಬಡವರಿಗೆ ಒಂದು ಗುಣ, ಶ್ರೀಮಂತರಿಗೇ ಒಂದು ಗುಣ ಹೀಗೆ ಬಡವರಲ್ಲಿ ಮತ್ತು ಸಿರಿವಂತರಲ್ಲಿ ಅಜಗಜಾಂತರ ವ್ಯತ್ಯಾಸವನ್ನು ಗುರುತಿಸಬಹುದು.

ಬಡತನ ಸೋಮಾರಿತನದಿಂದಲೇ ಬರುವುದು ಎಂಬುದನ್ನು ಬಹುತೇಕ ಜನರು ನಂಬಿದ್ದಾರೆ. ಆದರೆ ಬೇಂದ್ರೆಯವರು ತಮ್ಮ ಲೇಖನದಲ್ಲಿ ಈ ಮೇಲಿನ ಮಾತಿನಲ್ಲಿ ಸತ್ಯಕ್ಕಿಂತ ಸುಳ್ಳೇ ಹೆಚ್ಚಾಗಿದೆ ಎಂದು ಅಲ್ಲಗಳೆದಿರುವರು. ಏಕೆಂದರೆ ಬಡವರೇ ಎಲ್ಲರಿಗಿಂತಲೂ ಹೆಚ್ಚಿನ ಶ್ರಮ ಜೀವಿಗಳು ಎಂದು ಒಪ್ಪಿರುವರು. ಆದರೆ ಅವರ ಶ್ರಮಕ್ಕೆ ಸರಿಯಾದ ಪ್ರತಿಫಲ ಸಿಗದೇ ಶ್ರಮವೆಂಬುದು ವ್ಯರ್ಥವಾಗುತ್ತಿದೆ ಶ್ರಮವಿಲ್ಲದಿದ್ದರೆ ಬಡತನವೆನ್ನುವುದು ಹೆಚ್ಚಾಗುತ್ತಾ ಹೋಗುತ್ತಿರುತ್ತದೆ. ಈ ಬಡತನವು ಕೇವಲ ವ್ಯಕ್ತಿಗೆ ಮಾತ್ರ ಸಂಬಂಧಿಸಿರದೆ ಅದು ಯಾವುದಾದರು ಒಂದು ದೇಶವನ್ನೂ ಪ್ರತಿನಿಧಿಸುತ್ತದೆ. ಯಾವುದೇ ವ್ಯಕ್ತಿಯ ಶ್ರಮ ಕುಗ್ಗಿತೆಂದರೆ ಆ ದೇಶದ ಆರ್ಥಿಕ ವ್ಯವಸ್ಥೆಯೂ ಕುಗ್ಗಲಾರಂಭಿಸುತ್ತದೆ. ಆದ್ದರಿಂದ ಶ್ರಮವೆನ್ನುವುದು ಸಮಾನವಾದ ಹಂಚಿಕೆಯನ್ನು ಹೊಂದಬೇಕಾಗುತ್ತದೆ. 'ಕಾರ್ಲ್‌ಮಾರ್ಕ್ಸ್' ಕೂಡಾ ಶ್ರಮಕ್ಕೇ ಹೆಚ್ಚಿನ ಮಹತ್ವವನ್ನು ನೀಡಿದ್ದಾನೆ.

ಹೀಗಿದ್ದೂ ಗಮನಿಸಬೇಕಾದ ವಿಪರ್ಯಾಸದ ಸಂಗತಿಯೆಂದರೆ ಹೆಚ್ಚೆಚ್ಚು ಶ್ರಮ ವಹಿಸಿ ದುಡಿಯುವ ವ್ಯಕ್ತಿಗಳು ಬಡವರಾಗಿಯೇ ಉಳಿದಿರುವುದು ಮತ್ತು ಶ್ರಮವಹಿಸದ ಸಿರಿವಂತರು ಇನ್ನೂ ಹೆಚ್ಚಿನ ಸಿರಿಯನ್ನು ಹೊಂದಿ ಭೋಗ ಜೀವನದ ಲಾಲಸಿಗಳಾಗಿರುವುದು. ಕಡು ಬಡತನದ ಬೇಗೆಯಲ್ಲಿ ಬೇಯುತ್ತಿರುವ ಬಡವರು ತಮ್ಮ ದಿನನಿತ್ಯದ ಅತ್ಯಂತ ಹೆಚ್ಚು ದುಡಿಮೆಯನ್ನು ತಮ್ಮ ದಿನನಿತ್ಯದ ಊಟಕ್ಕಾಗಿಯೇ ವೆಚ್ಚ ಮಾಡುತ್ತಾರೆ. ಶ್ರಮದ ವೈಭವೀಕರಣವಿರುವಲ್ಲಿ ಅಥವಾ ಹೆಚ್ಚು ಕೆಲಸವಿರುವಲ್ಲಿ ಶೋಷಣೆ, ದೌರ್ಜನ್ಯ, ತುಳಿತ, ಮಾನಸಿಕ ಚಿತ್ರಹಿಂಸೆ ಸಹಜವೆಂಬಂತೆ ಹೆಚ್ಚಾಗಿರುತ್ತದೆ. ಆದ್ದರಿಂದ ದುಡಿಯುವ ವರ್ಗಕ್ಕೆ ದುಡಿಮೆ ಮತ್ತು ವಿರಾಮಗಳೆರಡೂ ಜರೂರಿನ ಅವಶ್ಯಕತೆಗಳಾಗಿವೆ. ಸಹಾನುಭೂತಿಯಿಂದ ಬಡತನವನ್ನು ಪರಿಹರಿಸಲಾಗುವುದಿಲ್ಲ. ಹಸಿದಾಗ ಅನ್ನ ಬೇಕೇ ಹೊರತು ಒಣ ವೇದಾಂತವಲ್ಲ. ಆಧುನಿಕ ಕಾಲದಲ್ಲಿ ತಾತ್ವಿಕವಾಗಿ ಬಡತನವನ್ನು ಪರಿಹರಿಸಲು ಪ್ರಜಾಪ್ರಭುತ್ವದ ಅಡಿಯಲ್ಲಿ ಹೋರಾಟಗಳೇ ನಡೆದಿವೆ. ಇವೆಲ್ಲವೂ ಸಾಧ್ಯವಾಗುವುದು ಕೇವಲ ಹೊಸ ಹಾಗೂ ಸುಸಂಬದ್ಧವಾದ ರಾಜಕೀಯ ಪದ್ಧತಿಯಿಂದ ಅಥವಾ ಕುವೆಂಪುರವರು ಹೇಳುವಂತೆ "ಹಣದ ಹೊಳೆಹರಿಸಿ ಚುನಾವಣೆಯಲ್ಲಿ ಗೆಲ್ಲುವ ಯಾವ ವ್ಯಕ್ತಿಯಾಗಲಿ ಯಾವ ಪಕ್ಷವಾಗಲಿ ಭ್ರಷ್ಟಾಚಾರಕ್ಕೆ ಬಲಿಯಾಗದೆ ಇರಲು ಸಾಧ್ಯವೇ ಇಲ್ಲ. ಆದ್ದರಿಂದ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಮತ್ತು ನಿಜವಾದ ಪ್ರಜಾಸತ್ತೆಯನ್ನು ರಕ್ಷಿಸುವ ಇಚ್ಚೆ ನಿಮಗಿದ್ದರೆ ಇಂದಿನ ರೀತಿಯ ಧನಾಶ್ರಿತ ಚುನಾವಣೆಯ ಪದ್ಧತಿಯನ್ನೇ ಬದಲಾಯಿಸಿ ಅದನ್ನು ಗುಣಾಶ್ರಿತವನ್ನಾಗಿ ಪರಿವರ್ತಿಸುವ ಕರ್ತವ್ಯ ನಿಮ್ಮ ಹೆಗಲಮೇಲೆ ಬೀಳುತ್ತದೆ" ಎಂದು ವಿದ್ಯಾರ್ಥಿಗಳಿಗೆ ಉಪದೇಶ ಭಾಷಣ ಮಾಡಿ ಎಚ್ಚರಿಸಿದ್ದಾರೆ.

ಬೇಂದ್ರೆಯವರು ಬಡತನ, ಅಲ್ಪಾಯುಷ್ಯ, ಅಜ್ಞಾನ ಇವುಗಳನ್ನು ಸಾಮಾಜಿಕ ಪಾಪಗಳು ಎಂದು ಬಗೆದಿದ್ದಾರೆ. ಈ ಮೂರೂ ಸಮಾಜಕ್ಕೆ ಒಂದಲ್ಲಾ ಒಂದು ರೀತಿಯಿಂದ ಕುಂದನ್ನುಂಟು ಮಾಡುತ್ತಾ ಬರುತ್ತವೆ ಈ ಬಡತನಕ್ಕೆ ಮೂಲ ಮತ್ತು ಪ್ರಮುಖ ಕಾರಣವೆಂದರೆ ಅನಕ್ಷರತೆ, ಹಾಗೂ ಅಜ್ಞಾನವೆನ್ನಬಹುದು. ಇದೇ ಬಡತನವು ಸಮಾಜಶಾಸ್ತ್ರಜ್ಞರು ಹೇಳುವಂತೆ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಅಂದರೆ ಸಮಾಜದ ಸ್ವಾಸ್ಥ್ಯ ಹಾಳಾಗಿ ವ್ಯಕ್ತಿ ದ್ವೇಷ, ಕರುಬು, ಕೊಲೆ, ದರೋಡೆಯಂತಹ ನೀಚ ಪ್ರವೃತ್ತಿಯನ್ನು ರೂಪಿಸಿಕೊಂಡು ತಮ್ಮ ಸಾವನ್ನು ತಾವೇ ಬರಮಾಡಿಕೊಳ್ಳುತ್ತಾರೆ. ಬೇಂದ್ರೆಯವರು ತಮ್ಮ 'ಅನ್ನಯಜ್ಞ'ದಲ್ಲಿ ಬಡತನವನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

***ಕೂಸುಗಳಿಗೆ ಹಾಲು ಇಲ್ಲ***
***ಪಶುಬಲಿಯೇ ನಡೆದಿದೆ***

ಮನುಷ್ಯ ತನ್ನಲ್ಲಿರುವ ಅಜ್ಞಾನವನ್ನು ತೊಲಗಿಸಿ ಅಲ್ಲಿ ಜ್ಞಾನದ ಜ್ಯೋತಿಯನ್ನು ತುಂಬಿಸಿಕೊಂಡರೆ ಬಡತನವೆಂಬ ಸಾಮಾಜಿಕ ಪಿಡುಗನ್ನು ತೊಲಗಿಸಬಹುದು. ದಾನಧರ್ಮದಿಂದ ಬಡತನವನ್ನು ಸರಿಪಡಿಸಿಕೊಳ್ಳಲು ಬಡತನವು ತಿರುಕರ ಜೋಳಿಗೆಯಲ್ಲಿ ಅದು ರುದ್ರನೊಡ್ಡಿದ ಕೈ ಎಂಬುದಾಗಿ ಬೇಂದ್ರೆಯವರು ಕಟುವಾಗಿ ಟೀಕಿಸಿದ್ದಾರೆ.

ಶ್ರೀಮಂತರೊಂದಿಗೆ ಅಥವಾ ಸಿರಿವಂತಿಕೆಯೊಂದಿಗೆ ನಿರಂತರ ಸಂಘರ್ಷವನ್ನು ನಡೆಸದ ಹೊರತು ಬಡತನವನ್ನು ಬುಡಮಟ್ಟ ಕೀಳಲು ಸಾಧ್ಯವಿಲ್ಲ. ಇದರ ಹೊರತು ಹೇಡಿಯಂತೆ ಪಲಾಯನದ ಬುದ್ಧಿದೋರದೆ ಶ್ರಮ ಅಥವಾ ನಿರಂತರವಾದ ಪ್ರಯತ್ನದಿಂದ ಮಾತ್ರವೇ ಬಡತನದ ನಿರ್ಮೂಲನೆ ಸಾಧ್ಯ. ಸಾಮಾಜಿಕ ನ್ಯಾಯದ ಪರಿಕಲ್ಪನೆ ಹೊಂದಿರುವ ಕುವೆಂಪುರವರ "ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು" ಎಂಬ ತತ್ವದಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿರುವ ಬೇಂದ್ರೆಯವರು ಇದರ ಆಧಾರದ ಮೇಲೆಯೇ ಆಧುನಿಕತೆ ನಿಂತಿದೆ ಮತ್ತು ಈ ತತ್ವದ ಅಡಿಯಲ್ಲಿ ಬಡತನವನ್ನು ನಿವಾರಿಸಬಹುದು ಎನ್ನುತ್ತಾರೆ ಹಾಗೂ ಬೇಂದ್ರೆಯವರ ಮತ್ತೊಂದು ಸಂಕಲನವಾದ ಗರಿಯಲ್ಲಿ "ತುತ್ತಿನ ಚೀಲ ತುಂಬುವ ತನಕ ಯಾವುದಕ್ಕೂ ಬೆಲೆಯಿಲ್ಲ" ಎಂದೂ ಹೇಳಿದ್ದಾರೆ. ಇದರಿಂದ ಅರಿವಾಗುವುದೆಂದರೆ ಬಡತನ ಎಲ್ಲಾ ಕಾಲಕ್ಕೂ ಇರುವ ನಿತ್ಯಸತ್ಯವಾಗಿದೆ ಎಂಬುದು. ಕುವೆಂಪುರವರೂ ಬಡತನದ ಬಗೆಗೆ 'ಕಲ್ಕಿ ಕವನ'ದಲ್ಲಿ ತಮ್ಮದೇ ಆದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ವಿಜ್ಞಾನ ಮತ್ತು ಜ್ಞಾನದ ಉದಯವೇ ಬಡತನದ ಅಂತ್ಯಕ್ಕೆ ನಾಂದಿ ಎಂಬ ಮಂತ್ರದಂಡವನ್ನು ಪ್ರತಿಯೊಬ್ಬ ವಕ್ತಿಯು ಅರಿತು ಸಾಧಿಸದ ಹೊರತು ಅದರ ನಿರ್ಮೂಲನೆ ಸಾಧ್ಯವಿಲ್ಲ. ಬೇಂದ್ರೆಯವರು ಕಡುಬಡತನದ ಬೇಗೆಯಲ್ಲಿ ಬೆಂದ ಸ್ವತಃ ಅನುಭವ ಪಡೆದವರಾದುದರಿಂದ ಅವರ ಕವನಗಳಲ್ಲಿ ಬಡತನದ ನಿರೂಪಣೆ ಅತ್ಯಂತ ಉನ್ನತ ಮಟ್ಟಕ್ಕೇರಿದೆ ಎನ್ನಬಹುದು.

ಉದಾ: "ನಾನು ಬಡವಿ, ಆತ ಬಡವ, ಒಲವೆ ನಮ್ಮ ಬದುಕು ಬಳಸಿಕೊಂಡೆವು ಅದನೆ ಅದಕು ಇದಕು ಎದಕು"

ನಂತರ ಪ್ರೇಮಕ್ಕೆ ಬಡತನ ಅಡ್ಡಿಯೆಂಬಂತೆ ಅವರ ಬಿಸಿಲ್ಗುದುರೆಯಲ್ಲಿ "ಮೊದಲೀಗೆ ಕಂಡಾಗ ಏಸೊಂದು ನಗೆ ಇತ್ತ, ಏರಿಕೆ ನಗೆಯಿತ್ತಾ, ನಕ್ಕೊಮ್ಮೆ ಹೇಳ ಚನ್ನಿ, ಆ ನಗಿ ಈಗೀಗ ಹೋಗೇತಿ ಎತ್ತೆತ್ತಾ....."

ಇದಷ್ಟಲ್ಲದೆ ಬೇಂದ್ರೆಯವರಿಗೆ ಬಡತನ ಮತ್ತು ಸಾವು ಎಂಬಿವು ಬದುಕಿಗೆ ಅಂಟಿಕೊಂಡಂತಿವೆ ಅದಕ್ಕಾಗಿ ಅವರ ಅನುಭವದ ಫಲಶೃತಿ ಸಾರವತ್ತಾಗಿದೆ, ಮತ್ತು ಒಂದು ಉತ್ಕಟವಾದ ಉತ್ತಮವಾದ ವಸ್ತುವಿನ ಚಿಂತನೆಯನ್ನು ಇದರಲ್ಲಿ ಮಾಡಿದ್ದಾರೆ. ಇವರ ಉದ್ದೇಶವೇ 'ವಿಧಿವಾದಕ್ಕಿಂತ' ಮುಖ್ಯವಾಗಿ 'ಜ್ಞಾನೋದಯ'ಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಹಾಗೂ ಆಧುನಿಕ

ಕಾಲದಲ್ಲಿ ಬಡತನವನ್ನು ಬುಡಮಟ್ಟ ಕೀಳಬೇಕೆಂಬುದೇ ಈ ಲೇಖನದ ಸಾರವಾಗಿದೆ ಎನ್ನಬಹುದು.

ಒಟ್ಟಿನಲ್ಲಿ ಬಡತನವನ್ನು ಬುಡ ಸಮೇತವಾಗಿ ಕಿತ್ತೊಗೆಯುವುದು ಹೇಗೆ ಎಂಬುದೇ ಇಂದಿನ ವೇದಾಂತಿಗಳಿಗೆ ಒಗಟಾಗಿಯೂ, ರಾಜಕಾರಣಿಗಳಿಗೆ ಗುರಿಯಾಗಿಯೂ, ಬಲ್ಲಿದರ ಸಮಸ್ಯೆಯಾಗಿಯೂ, ಬಡವರ ಬಡಿದಾಟವಾಗಿಯೂ ಇದೆ. ಆದ್ದರಿಂದ ಬಡತನವು ಸಾಹಿತ್ಯದ ಸಾರ್ವಭೌಮತ್ವದ ವಸ್ತುವಾಗಿದೆ.

**ಪರಾಮರ್ಶನ ಗ್ರಂಥಗಳು**


- ದ.ರಾ.ಬೇಂದ್ರೆ. (2011, ಆಗಸ್ಟ್ 6). *ಬಡತನವು ಸಾಹಿತ್ಯದ ವಸ್ತುವೇಕಾಗಿದೆ?.* ಪ್ರಜಾವಾಣಿ ದಿನಪತ್ರಿಕೆಯಲ್ಲಿ ಮರುಮುದ್ರಣ
- ಅಮೂರ, ಜಿ.ಎಸ್. (2011). *ಭುವನದ ಭಾಗ್ಯ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ಬುದ್ಧಣ್ಣ ಹಿಂಗಮಿರೆ. (1977). *ಇಳಿದು ಬಾ ತಾಯಿ: ಬೇಂದ್ರೆ ಅಭಿನಂದನಾ ಗ್ರಂಥ.* ಸಾಹಿತ್ಯ ಮಂಟಪ
- ದ.ರಾ.ಬೇಂದ್ರೆ. (1974). *ಸಾಹಿತ್ಯ ವಿರಾಟ್ ಸ್ವರೂಪ.* ಸಮಾಜ ಪುಸ್ತಕಾಲಯ